# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **2489** |
| 2 | ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 23.03.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಂದಾಯ ಇಲಾಖೆಯಿಂದ ನೀಡಲಾಗುತ್ತಿರುವ ಸೇವೆ ಪ್ರಮಾಣ ಪತ್ರಗಳು ಯಾವುವು; ಇವುಗಳಿಗೆ ನಿಗಧಿಪಡಿಸಿದ ಶುಲ್ಕಗಳೆಷ್ಟು; (ಪಟ್ಟಿಯನ್ನು ಒದಗಿಸುವುದು)</td><td>ಅಟಲ್‌ಜೀ ಜನಸ್ನೇಹಿ ಕೇಂದ್ರದ ವತಿಯಿಂದ ನಾಡಕಛೇರಿಗಳ ಮೂಲಕ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೇವಾ ಪ್ರಮಾಣ ಪತ್ರಗಳು ಹಾಗೂ ಅವುಗಳಿಗೆ ನಿಗದಿಪಡಿಸಿರುವ ಅರ್ಜಿಶುಲ್ಕವನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಆ)</td><td>ಈ ಸೇವೆ ಮತ್ತು ಪ್ರಮಾಣ ಪತ್ರ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು ಯಾವುವು; (ಸೇವೆ ಮತ್ತು ಪ್ರಮಾಣ ಪತ್ರವಾರು ಮಾಹಿತಿ ನೀಡುವುದು)</td><td>ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 44 ಎಜಿಎಸ್ 2018 ದಿನಾಂಕ: 10.09.2018 ರಂತೆ ಸೇವೆ ಮತ್ತು ಪ್ರಮಾಣ ಪತ್ರ ಪಡೆಯಲು ಸಲ್ಲಿಸಬೇಕಾದ ದಾಖಲೆಗಳ ವಿವರದ ಪಟ್ಟಿಯನ್ನು ಅನುಬಂಧ-2 ರಲ್ಲಿ ನೀಡಿದೆ.</td></tr>
<tr><td>ಇ)</td><td>ಮೋಜಿಣಿ ಇಲಾಖೆಯಿಂದ ಒದಗಿಸುವ ಪ್ರಮಾಣ ಪತ್ರ ಮತ್ತು ಸೇವೆಗಳು ಯಾವುವು; ನಿಗಧಿಪಡಿಸಿದ ಶುಲ್ಕ ಮತ್ತು ಅಗತ್ಯ ದಾಖಲೆಗಳು ಯಾವುವು;</td><td>ಭೂಮಾಪನ ಇಲಾಖೆಯಿಂದ ಸಾರ್ವಜನಿಕರಿಗೆ 11ಇ ನಕ್ಷೆ, ತತ್ಕಾಲ್ ಪೋಡಿ, ಅಲಿನೇಷನ್ ಪೂರ್ವ ನಕ್ಷೆ, ಹದ್ದುಬಸ್ತು, ಇ-ಸ್ವತ್ತು ಮತ್ತು ಇತರೆ ಅರ್ಜಿಗಳಲ್ಲಿ ಅಳತೆ ಮಾಡಿ ನಕ್ಷೆಗಳನ್ನು ನೀಡಲಾಗುತ್ತಿದೆ. ಭೂಮಾಪನ ಇಲಾಖೆಯ ಸುತ್ತೋಲೆ ನಂ.ಪಿ.ಎಂ.ಯು/ಮೋಜಿಣಿ-75/2012-13 ದಿನಾಂಕ: 26-12-2012 ರನ್ವಯ 11ಇ ನಕ್ಷೆ, ತತ್ಕಾಲ್ ಪೋಡಿ, ಅಲಿನೇಷನ್ ಪೂರ್ವ ನಕ್ಷೆ, ಹದ್ದುಬಸ್ತು, ಅಳತೆ (ನಕ್ಷೆ) ಕೋರಿ ಸಾರ್ವಜನಿಕರು ಅರ್ಜಿ ಸಲ್ಲಿಸಲು ಪಹಣಿಯಂತೆ ಹಕ್ಕುದಾರರಾಗಿದ್ದು, ಅವರು ಖುದ್ದು ಅಥವಾ ಅವರಿಂದ ದೃಢೀಕರಣ ಪತ್ರ ಪಡೆದಿರುವ ಅಧಿಕೃತ ಪ್ರತಿನಿಧಿಗಳು ಭಾವಚಿತ್ರ ಸಹಿತ ಗುರುತಿನ ಚೀಟಿಯೊಂದಿಗೆ ಸಂಬಂದಿಸಿದ ಹೋಬಳಿ ಮಟ್ಟದ ಅಟಲ್ ಜಿ ಜನಸ್ನೇಹಿ ಕೇಂದ್ರದಲ್ಲಿ ಜಮೀನಿಗೆ ಸಂಬಂದಿಸಿದ ಮಾಹಿತಿಯನ್ನು ವಿವರಿಸಿ ಆಪರೇಟರ್ ಮುಖಾಂತರ ಅರ್ಜಿ ದಾಖಲಿಸಿ, ಸರ್ಕಾರ ನಿಗಧಿ ಪಡಿಸಿರುವ ಶುಲ್ಕವನ್ನು ಭರಿಸಬೇಕಾಗುತ್ತದೆ.<br>ಮೇಲ್ಕಂಡ ಅಳತೆಗಳ ಅರ್ಜಿ ಶುಲ್ಕವನ್ನು ಸರ್ಕಾರವು ಆದೇಶ ಸಂಖ್ಯೆ: ಕಂಇ. 238 ಎಸ್‌ಎಸ್‌ಸಿ 2021, ದಿನಾಂಕ: 09-02-2022 ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.<br><table><tr><td>ಗ್ರಾಮೀಣ ಪ್ರದೇಶ -<br>2 ಎಕರವರೆಗೂ<br>2 ಎಕರೆಗಿಂತ ಹೆಚ್ಚು</td><td><u>ಹದ್ದುಬಸ್ತು:-</u><br>ರೂ.500/-<br>ಪ್ರತಿ ಎಕರೆಗೆ ಹೆಚ್ಚುವರಿ ಶುಲ್ಕ-300/-</td><td>11ಇ ನಕ್ಷೆ, ಅಲಿನೇಷನ್ ನಕ್ಷೆ & ತತ್ಕಾಲ್ ಪೋಡಿ<br>ರೂ.1500/-<br>ಪ್ರತಿ ಎಕರೆಗೆ ಹೆಚ್ಚುವರಿ ಶುಲ್ಕ-400/-</td></tr></table></td></tr>
</table>

| | | | | |
|---|---|---|---|---|
| | | **ನಗರ ಪ್ರದೇಶ** –<br>2 ಎಕರೆವರೆಗೂ<br>2 ಎಕರೆಗಿಂತ ಹೆಚ್ಚು | ರೂ.2,000/-<br>ಪ್ರತಿ ಎಕರೆಗೆ ಹೆಚ್ಚುವರಿ ಶುಲ್ಕ-400/-<br><br>ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರತಿ ಬಾಜುದಾರರಿಗೆ ರೂ.25.00. | ರೂ.2,500/-<br>ಪ್ರತಿ ಎಕರೆಗೆ ಹೆಚ್ಚುವರಿ ಶುಲ್ಕ-1000/- |
| ಈ) | ಈ ಶುಲ್ಕಗಳನ್ನು ಯಾವಾಗ ಪರಿಷ್ಕರಿಸಲಾಗಿದೆ? (ಹಿಂದಿನ ಮತ್ತು ಪ್ರಸ್ತುತ ವಾದ ತುಲನಾತ್ಮಕ ಪಟ್ಟಿ ಒದಗಿಸುವುದು) | ಸಾರ್ವಜನಿಕರು ವಿವಿಧ ಅಳತೆ ಕೋರಿ ಸಲ್ಲಿಸುವ ಅರ್ಜಿ ಶುಲ್ಕವನ್ನು ದಿನಾಂಕ: 09-02-2022 ರಲ್ಲಿ ಪರಿಷ್ಕರಿಸಲಾಗಿದೆ. ಹಿಂದಿನ ಮತ್ತು ಪ್ರಸ್ತುತ ಅರ್ಜಿಶುಲ್ಕ ಹೋಲಿಕೆ ಪಟ್ಟಿಯು ಈ ಕೆಳಕಂಡಂತಿದೆ. | | |

| **ವಿವರ** | | **2014** | | **2022** | |
|---|---|---|---|---|---|
| **ವಹಿವಾಟಿನ ತರಹೆ** | **ಜಮೀನು ಇರುವ ಪ್ರದೇಶ** | **2 ಎಕರೆ ವರೆವಿಗೂ** | **2 ಎಕರೆ ಗಿಂತ ಹೆಚ್ಚಿದ್ದಲ್ಲಿ ಪ್ರತಿ ಭಾಗಶಃ ಎಕರೆಗೆ** | **2 ಎಕರೆ ವರೆವಿಗೂ** | **ಪ್ರತಿ ಹೆಚ್ಚುವರಿ ಎಕರೆಗೆ ಶುಲ್ಕ** |
| **11ಇ,ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿ** | ನಗರೀಕೃತ | ರೂ.2000/- | ರೂ.200/- | ರೂ.2,500/-- | ರೂ.1000/- |
| | ಗ್ರಾಮೀಣ | ರೂ.1200/- | ರೂ.100/- | ರೂ.1500/- | ರೂ.400/- |
| **ಹದ್ದುಬಸ್ತು** | ನಗರಿಕೃತ | *ಪ್ರತಿ ಅರ್ಜಿಗೆ ರೂ. 35/- (*1979 ರಲ್ಲಿ ನಿಗದಿಪಡಿಸಿದ್ದು ) | | ರೂ.2,000/-- | ರೂ. 400/- |
| | ಗ್ರಾಮೀಣ | | | ರೂ.500/- | ರೂ. 300/- |

**ಸಂಖ್ಯೆ: ಕಂಇ 103 ಎಸ್‌ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು

ಅನುಬಂಧ -1 LAQ-2489

1

| ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿ ನೀಡುವ ಸೇವೆಗಳು (ನಾಡಕಛೇರಿ) | | |
|---|---|---|
| ಕ್ರಸಂ | ಸೇವೆಗಳು | ಅರ್ಜಿ ಶುಲ್ಕ |
| 1 | ಜಾತಿ ಮತ್ತು ಆದಾಯ ದೃಢೀಕರಣ ಪತ್ರ | 40/- |
| 2 | ಜಾತಿ ಪ್ರಮಾಣ ಪತ್ರ (ಪ್ರವರ್ಗ–I) | 40/- |
| 3 | ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಪ್ರಮಾಣ ಪತ್ರ (ಪ.ಜಾ/ಪ.ಪಂ) | 40/- |
| 4 | ಆದಾಯ ದೃಢೀಕರಣ ಪತ್ರ | 40/- |
| 5 | ಅನುಕಂಪದ ಆಧಾರದ ನೇಮಕಾತಿಗೆ ಆದಾಯ ದೃಢೀಕರಣ ಪತ್ರ | 40/- |
| 6 | ಉದ್ಯೋಗದ ಉದ್ದೇಶಕ್ಕೆ ಆದಾಯ ದೃಢೀಕರಣ ಪತ್ರ | 40/- |
| 7 | ಇತರ ಹಿಂದುಳಿದ ವರ್ಗಗಳ ದೃಢೀಕರಣ ಪತ್ರ (ಕೇಂದ್ರ) | 40/- |
| 8 | ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ | 40/- |
| 9 | ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ | 40/- |
| 10 | ಕೃಷಿ ಕಾರ್ಮಿಕ ದೃಢೀಕರಣ ಪತ್ರ | 40/- |
| 11 | ವ್ಯವಸಾಯಗಾರರ ದೃಢೀಕರಣ ಪತ್ರ | 40/- |
| 12 | ವಂಶವೃಕ್ಷ ದೃಢೀಕರಣ ಪತ್ರ | 40/- |
| 13 | ಬೋನಪೈಡ್ ದೃಢೀಕರಣ ಪತ್ರ | 40/- |
| 14 | ವಸತಿ ದೃಢೀಕರಣ ಪತ್ರ | 40/- |
| 15 | ಭೂ ಹಿಡುವಳಿ ಪ್ರಮಾಣ ಪತ್ರ | 40/- |
| 16 | ಜಮೀನು ಇಲ್ಲದಿರುವ ದೃಢೀಕರಣ ಪತ್ರ | 40/- |
| 17 | ಜೀವಂತ ದೃಢೀಕರಣ ಪತ್ರ | 40/- |
| 18 | ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ | 40/- |
| 19 | ಮರು ವಿವಾಹವಾಗದಿರುವ ದೃಢೀಕರಣ ಪತ್ರ | 40/- |
| 20 | ಮೇಲುಸ್ತರಕ್ಕೆ ಸೇರಿಲ್ಲವೆಂಬ ದೃಢೀಕರಣ ಪತ್ರ | 40/- |
| 21 | ಗೇಣಿ ರಹಿತ ದೃಢೀಕರಣ ಪತ್ರ | 40/- |
| 22 | ಜನಸಂಖ್ಯೆ ದೃಢೀಕರಣ ಪತ್ರ | 40/- |
| 23 | ವಾಸಸ್ಥಳ ದೃಢೀಕರಣ ಪತ್ರ | 40/- |
| 24 | ಸಣ್ಣ/ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ | 40/- |
| 25 | ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ | 40/- |
| 26 | ನಿರುದ್ಯೋಗಿ ದೃಢೀಕರಣ ಪತ್ರ | 40/- |
| 27 | ವಿಧವಾ ದೃಢೀಕರಣ ಪತ್ರ | 40/- |
| 28 | ಬೆಳೆ ದೃಢೀಕರಣ ಪತ್ರ | 40/- |
| 29 | ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಸತಿ & ಅರ್ಹತಾ ದೃಢೀಕರಣ ಪತ್ರ | 40/- |
| 30 | ಅಲ್ಪ ಸಂಖ್ಯಾತರ ದೃಢೀಕರಣ ಪತ್ರ | 40/- |
| 31 | ಆರ್ಯವೈಶ್ಯ ಜಾತಿ ಪ್ರಮಾಣ ಪತ್ರ (ವಿದ್ಯಾರ್ಥಿಗಳಿಗೆ ಮಾತ್ರ) | 40/- |
| 32 | ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರ(ಇಘಖ) | 40/- |
| 33 | ಪ.ಜಾ/ಪ.ಪಂ. ಪ್ರಮಾಣ ಪತ್ರ (ವಲಸಿಗರು) | 40/- |
| 34 | ವಿಶೇಷ ಚೇತನ ಪಿಂಚಣಿ | ಉಚಿತ |
| 35 | ವಿಧವಾ ಪಿಂಚಣಿ | ಉಚಿತ |
| 36 | ಸಂಧ್ಯಾ ಸುರಕ್ಷಾ ಯೋಜನೆ | ಉಚಿತ |
| 37 | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ | ಉಚಿತ |
| 38 | ಮೈತ್ರಿ | ಉಚಿತ |
| 39 | ಮನಸ್ವಿನಿ | ಉಚಿತ |
| 40 | ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಪಿಂಚಣಿ | ಉಚಿತ |

| | | |
|---|---|---|
| 41 | ಆತ್ಮಹತ್ಯೆಗೊಳಗಾದ ರೈತರ ವಿಧವೆಯರ ಪಿಂಚಣಿ | ಉಚಿತ |
| 42 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | ಉಚಿತ |
| 43 | ಅಂತ್ಯ ಸಂಸ್ಕಾರ ಯೋಜನೆ | ಉಚಿತ |
| 44 | ಎಂಡೋಸಲ್ಫಾನ್ ಪೀಡಿತರ ಮಾಸ ವೇತನ | ಉಚಿತ |
| | **ಭೂಮಿ ಸೇವೆಗಳು** | |
| 1 | ಪಹಣಿ ಪ್ರತಿ | * |
| 2 | ಮ್ಯುಟೇಷನ್ ಪ್ರತಿ (ಹಕ್ಕು ಬದಲಾವಣೆ ಪ್ರತಿ) | 15/- |
| 3 | ಖಾತಾ ಪ್ರತಿ | 15/- |
| 4 | ಭೂಮಿ ಆನ್‌ಲೈನ್ ಸೇವೆ | |
| | 1) ಹಕ್ಕು ಬದಲಾವಣೆ | (ಪ್ರತಿ ಸರ್ವೆ ನಂ. ಗೆ) 35/- |
| | 2) ಆಧಾರ/ ಬಿಡುಗಡೆ | 35/- |
| | 3) ಭೂ ಪರಿವರ್ತನೆ - ಜಿಲ್ಲಾಧಿಕಾರಿಗಳ ಭೂ ಪರಿವರ್ತನೆಯ ಆದೇಶವನ್ನು ಪಹಣಿಯಲ್ಲಿ ಕಾಲೋಚಿತಗೊ | 35/- |
| 5 | 94-ಸಿ ಮತ್ತು 94-ಸಿಸಿ -ಸರ್ಕಾರಿ ಜಮೀನಲ್ಲಿ ಅಕ್ರಮ ನಿರ್ಮಾಣಗಳ ಸಕ್ರಮೀಕರಣ. | 65/- |
| | **ಮೋಜಣಿ ಸೇವೆಗಳು** | |
| 1 | 11 ಇ ನಕ್ಷೆ | ** |
| 2 | ಇ-ಸ್ವತ್ತು | 800/- |
| 3 | ಸರ್ವೆ ದಾಖಲೆಗಳು | ಕನಿಷ್ಠ 6/- |
| ಇಲಾಖೆಯ ಸೇವೆಗಳು | | |
| 1 | ಆಧಾರ್ ನೋಂದಣಿ | ಉಚಿತ |
| 2 | ಇ-ಜನ್ಮ (ಜನನ ಮತ್ತು ಮರಣ ಪ್ರಮಾಣ ಪತ್ರ) | *** |
| 3 | ಜೀವನ್ ಪ್ರಮಾಣ್ | ಉಚಿತ |
| | **ಒಟ್ಟು 54 ಸೇವೆಗಳು** | |

ನಾಗರೀಕರು ನಾಡಕಛೇರಿಗಳಿಗೆ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಿದಲ್ಲಿ ಪ್ರತಿ ಅರ್ಜಿಗೆ ರೂ. 40/- ಗರಿಷ್ಠ ಅರ್ಜಿ ಶುಲ್ಕ

ನಾಗರೀಕರು ಖಾಸಗಿ ಸ್ಥಳೀಯ ಉದ್ಯಮಿದಾರರ ಅಥವಾ ಸೈಬರ್ ಸೆಂಟರ್ ಮೂಲಕ ಅರ್ಜಿಯನ್ನು ಸಲ್ಲಿಸಿದಲ್ಲಿ ಪ್ರತಿ ಅರ್ಜಿಗೆ ರೂ. 40/- ಗರಿಷ್ಠ ಅರ್ಜಿ ಶುಲ್ಕ

| | E-mail | Telephone Number |
|---|---|---|
| AJSK | nadakacheri@gmail.com | 080-22214550 |
| Bhoomi | bhoomi.bmc@gmail.com | 080-22113255 |
| Mojini | mojini.sslr@gmail.com | 080-22221037 |

ಕಂದಾಯ ಇಲಾಖೆ

ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆ, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ ಮತ್ತು ಭೂಮಿ ಉಸ್ತುವಾರಿ ಕೋಶ, ಎಸ್.ಎಸ್.ಎಲ್.ಆರ್. ಬಿಲ್ಡಿಂಗ್, ಕೆ.ಆರ್. ಸರ್ಕಲ್, ಬೆಂಗಳೂರು-560001.

**ಕರ್ನಾಟಕ ಸರ್ಕಾರ**

ಸಂಖ್ಯೆ:ಕಂಇ 44 ಎಜೆಎಸ್ 2018.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10.09.2018

**ಸುತ್ತೋಲೆ**

ಸಕಾಲ ಸೇವೆಗಳನ್ನು ಗಣಕೀಕೃತಗೊಳಿಸಲು ಮತ್ತು ಸಕಾಲ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 28.12.2017 ರಂದು ನಡೆದ ಸಭೆಯಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿಯಲ್ಲಿ ನೀಡುತ್ತಿರುವ ಕಂದಾಯ ಇಲಾಖೆಯ ವಿವಿಧ ಸೇವೆಗಳ ಸೇವಾ ವಿಲೇವಾರಿಗಾಗಿ ಅಗತ್ಯವಾದ ಎಲ್ಲಾ ದಾಖಲೆಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಿ, ವ್ಯಾಖ್ಯಾನಿಸಿ ಅರ್ಜಿದಾರರ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಹಂತದಲ್ಲಿಯೇ ದಾಖಲೆಗಳನ್ನು ಕಡ್ಡಾಯವಾಗಿ ನಮೂದು ಮಾಡಲು ಹಾಗೂ ನಂತರದ ಹಂತದಲ್ಲಿ ನಾಗರಿಕರಿಗೆ ಯಾವುದೇ ಸಮಸ್ಯೆಗಳು ಬರದಂತೆ ಮಾಡಲು, ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನೀಡುತ್ತಿರುವ ವಿವಿಧ ಸೇವೆಗಳ ಪೈಕಿ, ಆದಾಯ ಪ್ರಮಾಣ ಪತ್ರ ಮತ್ತು ನಿವಾಸಿ ಪ್ರಮಾಣ ಪತ್ರಗಳಿಗಾಗಿ ತೆಗೆದುಕೊಳ್ಳಬೇಕಾದ ದಾಖಲೆಗಳ ಪಟ್ಟಿಯನ್ನು ಪಟ್ಟಿ ಮಾಡಿ, ನಡವಳಿಯನ್ನು ಹೊರಡಿಸಲಾಗಿರುತ್ತದೆ.

ಕಂದಾಯ ಇಲಾಖೆಯ ವಿವಿಧ ಪ್ರಮಾಣ ಪತ್ರಗಳಿಗಾಗಿ, ನಾಗರಿಕರಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಹಂತದಲ್ಲಿಯೇ ಕಡ್ಡಾಯವಾಗಿ Standardise ಮಾಡಿರುವಂತಹ ದಾಖಲೆಗಳನ್ನು ಪಡೆದುಕೊಂಡಲ್ಲಿ, ನಾಗರಿಕರು ಸಕಾಲ ಸೇವೆಯಡಿ ಸಲ್ಲಿಸುವ ಅರ್ಜಿಗಳು ತಿರಸ್ಕೃತವಾಗದೇ ಇರುವುದು ಕಡಿಮೆಯಾಗುವ ಸಾಧ್ಯತೆ ಇರುತ್ತದೆ.

ಅರ್ಜಿದಾರರಿಂದ ವಿವಿಧ ಪ್ರಮಾಣ ಪತ್ರಗಳಿಗಾಗಿ ಪಡೆಯಬೇಕಾಗಿರುವ ದಾಖಲೆಗಳನ್ನು Standerdise ಮಾಡಲು, ಕಂದಾಯ ಇಲಾಖೆಯ ವಿವಿಧ 27 ಪ್ರಮಾಣ ಪತ್ರಗಳ ಸೇವೆಗಾಗಿ ಸಾರ್ವಜನಿಕರು ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುವ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸಿ ಇದರೊಂದಿಗೆ ಅನುಬಂಧದಲ್ಲಿ ಲಗತ್ತಿಸಿದೆ.

ಅದರಂತೆ ಸದರಿ Standerdise ಮಾಡಿರುವಂತಹ ದಾಖಲೆಗಳನ್ನು ಕಡ್ಡಾಯವಾಗಿ ಅರ್ಜಿದಾರರಿಂದ ವಿವಿಧ ಪ್ರಮಾಣ ಪತ್ರಗಳ ಸೇವೆಗಳಿಗಾಗಿ ರಾಜ್ಯದ ಎಲ್ಲಾ ನಾಡಕಛೇರಿಗಳಲ್ಲಿ ಅರ್ಜಿಯೊಂದಿಗೆ ಪಡೆದುಕೊಂಡು, ಸಕಾಲ ಸೇವೆಯಡಿ ಸಲ್ಲಿಸುವ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಲು ಸೂಚಿಸಿದೆ.

GL: 394
Dt: 5/10/18

4/10/18

(ಸಿ.ಮುಟ್ಟನಂಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಗೆ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರುಗಳು
2) ಎಲ್ಲಾ ಪ್ರಾದೇಶಿಕ ಆಯುಕ್ತರು

4) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
5) ಎಲ್ಲಾ ಉಪವಿಭಾಗಾಧಿಕಾರಿಗಳು/ತಹಶೀಲ್ದಾರ್‌ಗಳು. ಜಿಲ್ಲಾಧಿಕಾರಿಗಳ ಮುಖಾಂತರ
6) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ
7) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ(ಭೂಮಂಜೂ
ಮತ್ತು ಸೇವೆಗಳು-1&3)
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಕಡತ

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 1 | ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ಮಾಹಿತಿಯನ್ನು ಪಡೆಯುವುದು (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |
| 2 | ಮರು ವಿವಾಹವಾಗದಿರುವ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 3 | ಜಮೀನು ಇಲ್ಲದಿರುವ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |

## ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು

| o. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
|---|---|---|
| | ಆದಾಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>ಐಚ್ಛಿಕ:<br>1) ವೇತನ ಸ್ಲಿಪ್<br>2) ಆದಾಯ ತೆರಿಗೆ ಪಾವತಿ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ. |
| | ಗೇಣಿ ರಹಿತ ದೃಢೀಕರಣ ಪತ್ರ | 1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ<br>3) ಆಕ್ಷೇಪಣೆ ಇಲ್ಲದಿರುವ ಪ್ರಮಾಣ ಪತ್ರ, ತೆರಿಗೆ ಪಾವತಿ ರಶೀದಿ |
| | ವಿಧವಾ ಪ್ರಮಾಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| | ಜೀವಂತ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಕ್ರ.ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 4 | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ/ಪಂಗಡ) | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ. |
| 5 | ಇತರೆ ಹಿಂದುಳಿದ ವರ್ಗಗಳ ದೃಢೀಕರಣ ಪತ್ರ (ಕೇಂದ್ರ) | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ |
| 6 | ವಾಸಸ್ಥಳ ದೃಢೀಕರಣ ಪತ್ರ | ಇತ್ತೀಚಿನ ದಾಖಲೆಗಳ ಆಧಾರವಾದ,<br>ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>ಕಾರ್ಯವಿಧಾನ:<br>ಈ ಮೇಲಿನ ದಾಖಲೆಗಳಲ್ಲಿರುವ ಮಾಹಿತಿಗಳಲ್ಲದೇ ಅರ್ಜಿದಾರರು ಬೇರೆ ಮಾಹಿತಿ ಇರುವ ಪ್ರಮಾಣ ಪತ್ರವನ್ನು ಬಯಸಿದಲ್ಲಿ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಿಸುವುದು. |

ಸುತ್ತೋಲೆ ಸಂಖ್ಯೆ: ಕಂಇ 44 ಎಜಿಎಸ್ 2018 ದಿನಾಂಕ: 10.09.2018ರ ಅನುಬಂಧ

## ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು

| No. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
|---|---|---|
| | ಜನಸಂಖ್ಯೆ ದೃಢೀಕರಣ ಪತ್ರ | ಇತ್ತೀಚಿನ ದಾಖಲೆಗಳ ಆಧಾರವಾದ,<br>ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್।<br>ಕಾರ್ಯ ವಿಧಾನ:<br>ಈ ಮೇಲಿನ ದಾಖಲೆಗಳಲ್ಲಿರುವ ಮಾಹಿತಿಗಳಲ್ಲದೇ ಅರ್ಜಿದಾರರು ಬೇರೆ ಮಾಹಿತಿ ಇರುವ ಪ್ರಮಾಣ ಪತ್ರವನ್ನು ಬಯಸಿದಲ್ಲಿ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಿಸುವುದು. |
| | ಜಾತಿ ಮತ್ತು ಆದಾಯ ದೃಢೀಕರಣ ಪತ್ರ. | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ.<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ.<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ |
| | ಜಾತಿ ಪ್ರಮಾಣ ಪತ್ರ (ಪ್ರವರ್ಗ-೧) | ದಾಖಲೆಗಳು:<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>(2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಐಚ್ಛಿಕ:<br>ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ.<br>(1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಲೆಕ್ಕಿಗರಿಂದ ಪಡೆದ ವಂಶವೃಕ್ಷ.<br>(2) ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)<br>ಕಾರ್ಯ ವಿಧಾನ:<br>ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರಗಳ ವಿತರಣೆ. |

## ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು

| ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
|---|---|---|
| 7 | ವ್ಯವಸಾಯಗಾರರ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |
| 8 | ಸಣ್ಣ/ಅತಿ ಸಣ್ಣ ಹಿಡುವಳಿದಾರರ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |

## ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು

| ಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
|---|---|---|
| | ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>3) ಗ್ರಾಮಲೆಕ್ಕಿಗರಿಂದ ವಿತರಿಸಿದ ವಂಶವೃಕ್ಷ (ಅರ್ಜಿದಾರರು ಸಲ್ಲಿಸಬಹುದು ಅಥವಾ ಗ್ರಾಮಲೆಕ್ಕಿಗರಿಂದ ಇಲಾಖೆ ವತಿಯಿಂದ ಪಡೆಯಬಹುದು).<br>4) ಮರಣ ಪ್ರಮಾಣ ಪತ್ರ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| | ನಿರುದ್ಯೋಗಿ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>3) ಉದ್ಯೋಗ ವಿನಿಮಯ ಕಛೇರಿಯಿಂದ ಪಡೆದ ಪ್ರಮಾಣ ಪತ್ರ<br>4) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>ಕಾರ್ಯವಿಧಾನ:<br>ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿ ನೀಡಿದ ವರದಿಯ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| | ಸರ್ಕಾರಿ ನೌಕರಿಯಲ್ಲಿ ಇಲ್ಲದಿರುವ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>3) ಉದ್ಯೋಗ ವಿನಿಮಯ ಕಛೇರಿಯಿಂದ ಪಡೆದ ಪ್ರಮಾಣ ಪತ್ರ<br>4) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>5) ಪೋಷಕರ ಮರಣ ದೃಢೀಕರಣ ಪತ್ರ<br>ಕಾರ್ಯವಿಧಾನ:<br>ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿ ನೀಡಿದ ವರದಿಯ ಮೇಲೆ ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 9 | ಕೃಷಿ ಕಾರ್ಮಿಕ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |
| 10 | ಮೇಲುಸ್ತರಕ್ಕೆ ಸೇರಿಲ್ಲವೆಂಬ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>ಐಚ್ಛಿಕ:<br>1) ವೇತನ ಸ್ಲಿಪ್<br>2) ಆದಾಯ ತೆರಿಗೆ ಪಾವತಿ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ. |
| 11 | ಭೂ ಹಿಡುವಳಿ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು. (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |

## ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು

| ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
|---|---|
| ಬೋನಫೈಡ್ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಶಾಲಾ ವರ್ಗಾವಣೆ ಪ್ರಮಾಣ ಪತ್ರ<br>3) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ |
| ಸಾಲ ತೀರಿಸುವ ಶಕ್ತಿ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಆರ್.ಟಿ.ಸಿ. ಪಹಣಿ (ಆಪರೇಟರ್ ಆನ್‌ಲೈನ್‌ನಲ್ಲಿ ಕೂಡ ಮುದ್ರಿಸಬಹುದು) ಮತ್ತು ಜಮೀನಿಗೆ ಸಂಬಂಧಿಸಿದ ಇತರೆ ದಾಖಲೆಗಳು<br>3) ಬೇಡಿಕೆ ಅನುಸರಿಸಿದಂತೆ ಉಪ ನೋಂದಣಾಧಿಕಾರಿಗಳಿಂದ ಪಡೆದ ೧೨ ವರ್ಷಗಳ ಋಣಭಾರ ಪ್ರಮಾಣ ಪತ್ರ<br>4) ಆದಾಯ ತೆರಿಗೆ ಪಾವತಿ (if In income tax bracket) |
| ಉದ್ಯೋಗದ ಉದ್ದೇಶಕ್ಕೆ ಆದಾಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಆದಾಯದ ಬಗ್ಗೆ ಸ್ವಯಂ ಘೋಷಿತ ಪತ್ರ<br>ಐಚ್ಛಿಕ:<br>1) ವೇತನ ಸ್ಲಿಪ್<br>2) ಆದಾಯ ತೆರಿಗೆ ಪಾವತಿ<br>ಕಾರ್ಯ ವಿಧಾನ:<br>ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ. |
| ಅನುಕಂಪದ ಆಧಾರದ ನೇಮಕಾತಿಗೆ ಆದಾಯ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಮರಣ ಪ್ರಮಾಣ ಪತ್ರ<br>3) ಮರಣ ಹೊಂದಿದವರ ವೇತನ ಪ್ರಮಾಣ ಪತ್ರ ಹಾಗೂ ಪಿಂಚಣಿ ಪ್ರಮಾಣ ಪತ್ರ<br>4) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಆಧಾರದ ಮೇಲೆ ಪ್ರಮಾಣ ಪತ್ರ ವಿತರಿಸುವುದು. |

| ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನಾಗರೀಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಗಾಗಿ ಅಗತ್ಯವಿರುವ ದಾಖಲೆಗಳು | | |
|---|---|---|
| ಸಂ. | ಸೇವೆಗಳು | ಪ್ರಮಾಣೀಕೃತ ದಾಖಲೆಗಳು |
| 6 | ವಂಶವೃಕ್ಷ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>ಕಾರ್ಯ ವಿಧಾನ:<br>ಗ್ರಾಮಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿದ ವರದಿಯ ಮೇಲೆ ಪ್ರಮಾಣ ಪತ್ರ ವಿತರಿಸುವುದು. |
| 7 | ಬೆಳೆ ದೃಢೀಕರಣ ಪತ್ರ | ಕಡ್ಡಾಯ ದಾಖಲೆಗಳು:<br>1) ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್<br>2) ಪಹಣಿ ಪತ್ರ<br>ಕಾರ್ಯ ವಿಧಾನ:<br>ಭೂಮಿ ಆನ್‌ಲೈನ್‌ನಲ್ಲಿ ಪಹಣಿಯನ್ನು ಆಪರೇಟರ್ ವೀಕ್ಷಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇದ್ದಲ್ಲಿ, ಪಹಣಿಯ ಆಧಾರದ ಮೇಲೆ ಒಂದು ದಿನದ ಸೇವೆಯಾಗಿ (ONE DAY SERVICE) ಪ್ರಮಾಣ ಪತ್ರ ವಿತರಿಸುವುದು. ಪಹಣಿಯಲ್ಲಿ ಅರ್ಜಿದಾರರ ಹೆಸರು ಇಲ್ಲದಿದ್ದಲ್ಲಿ, ಗ್ರಾಮಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡುವುದು ಅಥವಾ ಗ್ರಾಮಲೆಕ್ಕಿಗರಿಂದ ವಂಶವೃಕ್ಷವನ್ನು ಪಡೆಯುವುದು (ಅರ್ಜಿದಾರರಿಂದ ಅಥವಾ ಇಲಾಖೆ ವತಿಯಿಂದ) ಮತ್ತು ಪ್ರಮಾಣ ಪತ್ರ ವಿತರಿಸುವುದು. |